# ಒಂದನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.

**CC No.: 131/2007**
**C.W.: 14**
**P.W.: 2**

ಸಾಕ್ಷಿದಾರರ ಹೆಸರು : ಜಿ.ಸಿ. ಲಿಂಗರಾಜು
ತಂದೆಯ ಹೆಸರು ಃ ಕೆ.ಜಿ. ಚಂದ್ರಪ್ಪ
ವಯಸ್ಸು : 53 ವರ್ಷ
ಉದ್ಯೋಗ : ಸಹಾಯಕ ಅರಣ್ಯ ಸಂರಕ್ಷಾಧಿಕಾರಿ
ಸಾಕೀನ : ಸಕಲೇಶಪುರ ಉಪ ವಿಭಾಗ, ಸಕಲೇಶಪುರ

ಸಾಕ್ಷಿಗೆ ಈ ದಿನ ದಿಃ 17.02.2020 ರಂದು ಪ್ರಮಾಣ ವಚನ ಬೋಧಿಸಲಾಯಿತು.

2005 ರಿಂದ 2008 ರವರೆಗೆ ನಾನು ಕನಕಪುರ ವಲಯದಲ್ಲಿ ವಲಯಾ ಅರಣ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೆ . ದಿನಾಂಕಃ 20.12.2006 ರಂದು ರಾಮದೇವರ ಬೆಟ್ಟ ಗಸ್ತಿನ ಅರಣ್ಯ ಸಿಬ್ಬಂದಿಯಾದ ನಾಗರಾಜುರವರು ಅಕ್ರಮ ಗಣಿಗಾರಿಕೆ ಆಗುತ್ತಿದ್ದ ಬಗ್ಗೆ ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ. ನಾನು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಯಾಗಿ ನೇಮಕಗೊಂಡು ಆರೋಪಿಗೆ ದಿನಾಂಕಃ 07.10.2006 ರಂದು ನೋಟೀಸನ್ನು ಕೊಟ್ಟಿರುತ್ತೇನೆ. ಆನಂತರ ನಾನು ಆರೋಪಿಯ ಹೇಳಿಕೆಯನ್ನು , ತನಿಖಾ ವರದಿಯ ನಕಾಶೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವರದಿ ಮತ್ತು ಮಹಜರ್ ಹಾಗೂ ಅಮಾನತು ವರದಿಯ ಮೇರೆಗೆ ನನ್ನ ವಿಚಾರಣಾ ವರದಿಯನ್ನು ಉಪ ಅರಣ್ಯಾ ಸಂರಕ್ಷಣಾಧಿಕಾರಿಯವರಿಗೆ ದಿನಾಂಕಃ 20.12.2006 ರಂದು ಸಲ್ಲಿಸಿರುತ್ತೇನೆ. ತದನಂತರ ದಿನಾಂಕಃ 22.12.2006 ರಂದು ಮಾನ್ಯ ಉಪ ಅರಣ್ಯಾ ಸಂರಕ್ಷಣಾಧಿಕಾರಿಯವರು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಆರೋಪಿ ಪಟ್ಟಿ ಸಲ್ಲಿಸಲು ಆದೇಶವನ್ನು ನನಗೆ ಕೊಟ್ಟಿರುತ್ತಾರೆ. ನಂತರ ದಿನಾಂಕ 08.01.2007 ರಂದು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿರುತ್ತೇನೆ. ನನ್ನ ಸಿಬ್ಬಂದಿಗಳಾದ ಚಾಸಾ 1 ಮತ್ತು 2 ರವರ ವಿಚಾರಣೆಯನ್ನು ಮಾಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಸದರಿ ನೋಟೀಸ್ಸನ್ನು ನಾನು ಆರೋಪಿಗೆ ನೀಡಿದ್ದಾಗಿ ನುಡಿದಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿ.ಪಿ.3 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ತಾನು ಸಲ್ಲಿಸಿದ ವಿಚಾರಣಾ ವರದಿ ಎಂದು ಗುರುತಿಸಿದ್ದು, ಅದನ್ನು ನಿ.ಪಿ.4 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.4 ಎ ಎಂದು ಗುರುತಿಸಲಾಯಿತು. ಆರೋಪ ಪಟ್ಟಿಯನ್ನು ಸಲ್ಲಿಸಲು ತನಗೆ ಮೇಲಾಧಿಕಾರಿಗಳು ನೀಡಿದ ಆದೇಶವನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಅದನ್ನು ನಿ.ಪಿ. 5 ಎಂದು ಗುರುತಿಸಲಾಯಿತು. ಆರೋಪಿಯು ನ್ಯಾಯಾಲಯದಲ್ಲಿ ಹಾಜರಿದ್ದು ಅವರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ  ಆರೋಪಿತರ ಪರ ಎಚ್.ಎಲ್.ಎ. ವಕೀಲರಿಂದಃ

ಆರೋಪಿ ಪಟ್ಟಿಯಲ್ಲಿನ ಸಾಕ್ಷಿದಾರರು ನಮ್ಮ ಇಲಾಖೆ, ಕಂದಾಯ ಇಲಾಖೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಪಟ್ಟವರು.  ದಿನಾಂಕ **30.05.2006** ರಿಂದ ನಾನು ತನಿಖೆಯನ್ನು ಆರಂಭಿಸಿರುತ್ತೇನೆ.  ಈ ಮೊದಲು ನನಗೆ ನಮ್ಮ ಸಿಬ್ಬಂದಿಗಳು ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸಿದ್ದರಬೆಟ್ಟ ಕಿರು ಅರಣ್ಯ ಪ್ರದೇಶದ ಬಿಜ್ಜಹಳ್ಳಿ ಸರ್ವೆ ನಂಬರ್ **27** ರಲ್ಲಿ ಅಕ್ರಮ ಗಣಿಗಾರಿಕೆ ಆರೋಪಿಯು ಮಾಡುತ್ತಿರುತ್ತಾರೆ.  ಆರೋಪಿಯು ನನ್ನ ನೋಟೀಸ್ಸಿಗೆ ನೀಡಿದ ಉತ್ತರದ ಬಗ್ಗೆ ದಾಖಲೆಯನ್ನು ಹಾಜರು ಮಾಡಿರುತ್ತೇನೆ.  ಅದೇ ಸರ್ವೆ ನಂಬರ್ ನಲ್ಲಿ  ತನಗೆ ಲೀಜ್ ಆದ ಬಗ್ಗೆ ಆರೋಪಿಯು ಮಾಹಿತಿ ಕೊಟ್ಟಿರುತ್ತಾರೆ.  ಲೀಜ್ ಆದ ಪ್ರದೇಶವು ಅರಣ್ಯ ಪ್ರದೇಶವಿರುತ್ತದ್ದೆ. ಯಾವುದೇ ವ್ಯಕ್ತಿ ಲೀಜನ್ನು ನಡೆಸಬೇಕಾದರೆ ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಗಣಿ ಭೂವಿಜ್ಞಾನ ಇಲಾಖೆ ಪರವಾನಿಗೆ ಕೊಡಬೇಕು ಎಂದರೆ ಸರಿ.  ದಿನಾಂಕಃ **16.04.2003** ರಂದು ಉಪ ಸಂರಕ್ಷಣಾಧಿಕಾರಿಗಳು ಸರ್ವೆ ನಂಬರ್ **27** ಆರೋಪಿಯು ಗಣಿಗಾರಿಕೆ ನಡೆಸುತ್ತಿದ್ದ ಪ್ರದೇಶ ಅರಣ್ಯ ಪ್ರದೇಶಕ್ಕೆ ಬರುವುದಿಲ್ಲ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರಿಗೆ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ತಪ್ಪು ಎಂದು ನಂತರ ದೃಢೀಕರಿಸಿರುತ್ತಾರೆ.  ಸಾಕ್ಷಿ ಮುಂದುವರೆದು ಆ ಬಗ್ಗೆ ನಾನು ನನ್ನ ತನಿಖಾ ವರದಿಯಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.  **2004** ರಿಂದ ಪ್ರ.ವ.ವರದಿಯನ್ನು ಸಲ್ಲಿಸುವ ವರೆಗೆ ಅಕ್ರಮ ಗಣಿಗಾರಿಕೆಯನ್ನು ಆರೋಪಿಯು ಮಾಡುತ್ತಿದ್ದ ಬಗ್ಗೆ ನಮಗೆ ಸಿಬ್ಬಂದಿ ತಿಳಿಸಿರಲಿಲ್ಲ.  ಸಿದ್ದರಬೆಟ್ಟ ಕಿರು ಅರಣ್ಯ ಅರಣ್ಯೇತರ ಚಟುವಟ್ಟಿಕೆಗಾಗಿ ಕಂದಾಯ ಇಲಾಖೆ ಬಿಡುಗಡೆಯಾದ ಬಗ್ಗೆ ನಾನು ವರದಿಯನ್ನು ತರಿಸಿಕೊಂಡಿಲ್ಲ.  ದಿನಾಂಕಃ **30.04.1959** ರಲ್ಲಿ ಆ ರೀತಿ ಬಿಡುಗಡೆಯಾದ ಬಗ್ಗೆ ಸರ್ಕಾರಿ ಆದೇಶ ಇರುವ ಬಗ್ಗೆ ನನಗೆ ಗೊತ್ತಿಲ್ಲ.  ಸದರಿ ಸರ್ವೆ ನಂಬರ್ **27** ರಲ್ಲಿ **305** ಎಕರೆ ಅರಣ್ಯ ಪ್ರದೇಶಕ್ಕೆ ಸೇರಿದೆ ಎಂದು ಅಧಿಸೂಚನೆ ಇದೆ.  ಸರ್ವೆ ನಂಬರ್ **19, 30,27,28** ರಲ್ಲಿ **1144** ಎಕರೆ ಒಟ್ಟು ಅರಣ್ಯ ಪ್ರದೇಶ ಇತ್ತು ಎಂದರೆ ಸರಿ.  ಅದರಲ್ಲಿ **979** ಎಕರೆ ಪ್ರದೇಶವನ್ನು ಕಂದಾಯ ಇಲಾಖೆಗೆ ಹಸ್ತಾಂತರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.  ಸದರಿ ಜಮೀನನ್ನು ಹಲವಾರು ರೈತರಿಗೆ ಅವರು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.  ಸದರಿ **979** ಎಕರೆಯಲ್ಲಿ ಆರೋಪಿಗೆ ಮಂಜೂರು ಆದ **4** ಎಕರೆ ಪ್ರದೇಶ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.  ಆರೋಪಿಯು ಕಂದಾಯ ಇಲಾಖೆಗೆ ಗಣಿಗಾರಿಕೆ ಮಾಡಲು ಅನುಮತಿ ನೀಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.  ಆ ಪ್ರಕಾರ ಸರ್ಕಾರ **4** ಎಕರೆ ಪ್ರದೇಶವನ್ನು ಅವರಿಗೆ ಗುತ್ತಿಗೆ ನೀಡಿತ್ತು ಎಂದರೆ ಸಾಕ್ಷಿ ವರದಿಯಲ್ಲಿ ಇದೆ ಎಂದು ನುಡಿಯುತ್ತಾರೆ.  ಆರೋಪಿಯು ಅರ್ಜಿ ಸಲ್ಲಿಸಿದ ಕಾಲಕ್ಕೆ ನಾವು ಯಾವುದೇ ತಕರಾರನ್ನು

ಸದರಿ ಪ್ರದೇಶ ನಮ್ಮ ಇಲಾಖೆಗೆ ಸೇರಿರುತ್ತದೆ ಎಂದು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಗೆ ಮಂಜೂರು ಆದ 4 ಎಕರೆ ಪ್ರದೇಶ ಅರಣ್ಯ ಇಲಾಖೆಯ ವ್ಯಾಪ್ತಿಯಿಂದ ಹೊರಗೆ ಬಂದರು ಸಹ ನಾನು ನನ್ನ ಮೇಲಾಧಿಕಾರಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಸರ್ಕಾರಕ್ಕೆ ರಾಜಧನವನ್ನು ಸಲ್ಲಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಿದ್ದರ ಬೆಟ್ಟಕ್ಕೆ ಕಿರು ಅರಣ್ಯ 1959 ರಲ್ಲಿ ಕಂದಾಯ ಇಲಾಖೆಗೆ ಅಸ್ತಾಂತರವಾಗಿರುವ ಕಾರಣ ಕರ್ನಾಟಕ ಅರಣ್ಯ ಕಾಯಿದೆ 1964 ರಂತೆ ಈ ಪ್ರಕರಣವನ್ನು ದಾಖಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಆರೋಪಿಯನ್ನು ನೋಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಕಛೇರಿಗೆ ಬಂದಿಲ್ಲ ಹಾಗೂ ನನಗೆ ಅವರು ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಲಯ,
ಕನಕಪುರ